ECA 3/2023 PW-1

**ದಿನಾಂಕಃ 16-04-2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ.ಎ.ಟಿ.ಎಸ್. ವಕೀಲರಿಂದಃ**

ನಿಪಿ-11 ರಿಂದ 13 ರ ಭಾವಚಿತ್ರಗಳನ್ನು ನನ್ನ ಮಗ ಸ್ನೇಹಿತರ ಜೊತೆ ಇರುವುದನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-11 ರಿಂದ 13 ರ ಭಾವಚಿತ್ರಗಳಲ್ಲಿ ದಿನಾಂಕ ಮತ್ತು ಸಮಯ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ 1ನೇ ಎದುರುದಾರರ ಬಳಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀಮತಿ.ಬಿ.ಟಿ.ಎಲ್. ವಕೀಲರಿಂದಃ**

ನಾನು ಮೊದಲಿನ ಮುಖ್ಯ ವಿಚಾರಣೆಯಲ್ಲಿ ನಿಪಿ-11 ರಿಂದ 13 ರ ಭಾವಚಿತ್ರಗಳನ್ನು ಕೊಟ್ಟಿಲ್ಲ, ಸಾಕ್ಷಿ ಮುಂದುವರೆದು ನನ್ನ ಮಗ 1ನೇ ಎದುರುದಾರರ ಬಳಿ ಕೆಲಸ ಮಾಡುತ್ತಿದ್ದ ಎಂಬುದಕ್ಕೆ ಸಾಕ್ಷ್ಯ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-11 ರಿಂದ 13 ರ ಭಾವಚಿತ್ರಗಳನ್ನು ಎಡಿಟ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-11 ರಿಂದ 13 ರ ಭಾವಚಿತ್ರಗಳಲ್ಲಿ ನನ್ನ ಮಗ ಕೆಲಸ ಮಾಡುತ್ತಿರುವ ಬಗ್ಗೆ ಕಾಣಿಸಿರುವುದಿಲ್ಲ, ಸಾಕ್ಷಿ ಮುಂದುವರೆದು ಕೆಲಸವಾದ ನಂತರ ನಿಂತು ಫೋಟೋ ತೆಗೆಸಿಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ನಿಪಿ-11 ರಿಂದ 13 ರಭಾವಚಿತ್ರಗಳನ್ನು ನನ್ನ ಮಗ ಸ್ನೇಹಿತರ ಜೊತೆ ಹೋಗಿ ತೆಗೆದುಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಿಪಿ-11 ರಿಂದ 13 ರಭಾವಚಿತ್ರಗಳಲ್ಲಿ ದಿನಾಂಕ, ಸಮಯ ಮತ್ತು ವರ್ಷ ಬಂದಿಲ್ಲ ಎಂದರೆ ಸರಿ. ನಿಪಿ-11 ರಿಂದ 13 ರ ಭಾವಚಿತ್ರಗಳನ್ನು ನನ್ನ ಮಗ 1ನೇ ಎದುರುದಾರರ ಜೊತೆ ಕೆಲಸ ಮಾಡುತ್ತಾನೆ ಎಂದು ಸೃಷ್ಠಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನಿಪಿ-10 ರ ಹೇಳಿಕೆಯಲ್ಲಿ 1ನೇ ಎದುರುದಾರರ ಸಹಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-10 ರಂತೆ 1ನೇ ಎದುರುದಾರರು

ಪೊಲೀಸರಿಗೆ ನನ್ನ ಸಮಕ್ಷಮ ಹೇಳಿಕೆ ಕೊಟ್ಟಿರುತ್ತಾರೆ. ನಿಪಿ-10 ಕ್ಕೆ ನಾನು ಸಹಿ ಮಾಡಿರುವುದಿಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಪರ ಹಿ.ಸಿ.ಜೆ ಮತ್ತು ಜೆ.ಎಮ್.ಎಫ್.ಸಿ.
ಶಿರಾ.